# ನಗರ ಯೋಜನಾ ಪ್ರಾಧಿಕಾರ
# ರಾಣೇಬೆನ್ನೂರು

## 2021-22 ನೇ ಸಾಲಿನ
## ಲೆಕ್ಕ ಪರಿಶೋಧನಾ ವರದಿ

ಹಿರಿಯ ಉಪನಿರ್ದೇಶಕರವರ ಕಛೇರಿ,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಹಾವೇರಿ

"ಸಿ" ಬ್ಲಾಕ್ ಕೊಠಡಿ ಸಂಖ್ಯೆ :34
ಜಿಲ್ಲಾ ಆಡಳಿತ ಭವನ, ಹಾವೇರಿ-581110
ದೂರವಾಣಿ ಸಂಖ್ಯೆ : 08375-249004
ಇ-ಮೇಲ್ :aclac.hvr@gmail.com

# ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಸಂಖ್ಯೆ: Sr ಡಿ.ಡಿ/ಎಲ್.ಎ.ಸಿ./ಹಾ/ಲೆ.ಪ.ವರದಿ/21-22/306 ದಿನಾಂಕ : 30-09-2022

ಇವರಿಗೆ,

ಸದಸ್ಯ ಕಾರ್ಯದರ್ಶಿ
ನಗರ ಯೋಜನಾ ಪ್ರಾಧಿಕಾರ
ರಾಣೇಬೆನ್ನೂರು

ಮಾನ್ಯರೇ,

ವಿಷಯ : ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರು 2021-22 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಕಳಿಸುವ ಕುರಿತು.

-----0-----

ರಾಣೇಬೆನ್ನೂರು ನಗರಯೋಜನಾ ಪ್ರಾಧಿಕಾರ ಸನ್ 2021 - 22 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಈ ಮೂಲಕ ತಮಗೆ ಕಳುಹಿಸುತ್ತಾ, ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು ವರದಿಯಲ್ಲಿ ತಿಳಿಸಿರುವ ಆಕ್ಷೇಪಣೆ ವಸೂಲಾತಿ ಹಾಗೂ ನ್ಯೂನತೆಗಳಿಗೆ ಅನುಸರಣಾ ವರದಿಯನ್ನು ತಯಾರಿಸಿ ಈ ಕಚೇರಿಗೆ ಸಲ್ಲಿಸಲು ತಿಳಿಸಿದೆ.

ಲೆಕ್ಕ ಪರಿಶೋಧಾನಾ ವರದಿ ಮುಟ್ಟಿದ್ದಕ್ಕೆ ಸ್ವೀಕೃತಿ ಕಳುಹಿಸಿಕೊಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ

ಹಿರಿಯ ಉಪನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಹಾವೇರಿ.

# ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರು ಇವರ 2021-2022 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿನ ಸಂಕ್ಷಿಪ್ತ ನ್ಯೂನ್ಯತೆಗಳ ವಿವರ

| ಅ.ನಂ. | ಕಂಡಿಕೆ ಸಂ. | ನ್ಯೂನ್ಯತೆಗಳ ವಿವರ |
|---|---|---|
| 1 | 08 | ವಾರ್ಷಿಕ ಲೆಕ್ಕಪತ್ರಗಳ ಕುರಿತು |
| 2 | 09 | ಪ್ರಾಧಿಕಾರದ ಲೆಕ್ಕಪತ್ರಗಳನ್ನು ದ್ವಿಮೂದು ಲೆಕ್ಕಪದ್ಧತಿಯಲ್ಲಿ ನಿರ್ವಹಿಸದಿರುವುದು |
| 3 | 10 | ಆಯವ್ಯಯ ಪತ್ರಿಕೆ ಕುರಿತು |
| 4 | 12 | ನಗದು ಪುಸ್ತಕದ ನ್ಯೂನ್ಯತೆಗಳ ವಿವರ |
| 5 | 16 | ಠೇವಣಿ ವ್ಯವಹಾರ ಕುರಿತು |
| 6 | 17 | ಹಣ ತೊಡಗಿಸಿದ ವ್ಯವಹಾರದ ಕುರಿತು |
| 7 | 18 | ಕೊಳಚೆ ನಿರ್ಮೂಲನಾ ಉಪಕರ (ಸ್ಲಂಸೆಸ್) ವಸೂಲಿ ಕುರಿತು |
| 8 | 20 | ಉತ್ತಮತೆಯ ಶುಲ್ಕದ ಶೇ. 5% ರ ಭಾಗ ರಾಜ್ಯ ನಗರ ಯೋಜನಾ ಮಂಡಳಿಗೆ ಭರಣಾ ಮಾಡುವ ಕುರಿತು |
| 9 | 21 | ವರ್ಗೀಕರಣ ರಜಿಸ್ಟರ್ ಕುರಿತು |
| 10 | 22 | ಕಟ್ಟಡ ಬಾಡಿಗೆ ಪೂರ್ಣ ಪ್ರಮಾಣದಲ್ಲಿ ವಸೂಲಿಸದಿರುವುದು |
| 11 | 24 | ದಿನವಹಿ ಪುಸ್ತಕವನ್ನು ನಿರ್ವಹಿಸದಿರುವ ಬಗ್ಗೆ |
| 12 | 25 | ಕಟ್ಟಡ ಪರವಾನಿಗೆಯ ನೀಲಿ ನಕ್ಷೆಗಳಿಗೆ ಮಂಜೂರಾತಿ ನೀಡುವಾಗ ಶುಲ್ಕಗಳನ್ನು ಲೆಕ್ಕಾಚಾರದ ಬಗ್ಗೆ |
| 13 | 26 | ಆದಾಯಕರ ರಿಟನ್ಸ್ ಸಲ್ಲಿಸುವ ಕುರಿತು |
| 14 | 27 | ಪ್ರಾಧಿಕಾರದ ಹಣವನ್ನು ಅಭಿವೃದ್ಧಿ ಕುರಿತು ಬಳಕೆ ಮಾಡುವ ಬಗ್ಗೆ |
| 15 | 28 | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 18 (ಎ) ರಡಿಯಲ್ಲಿ ಪಾವತಿಸಿಕೊಳ್ಳುವ ''ಕೆರೆ ಸಂರಕ್ಷಣಾ ಶುಲ್ಕವನ್ನು'' ವಸೂಲಿ ಮಾಡದ ಕುರಿತು |
| 16 | 32 | ಉತ್ತಮತೆ ಶುಲ್ಕದ ವ್ಯತ್ಯಾಸ ಕುರಿತು |
| 17 | 34 | ಸ್ವಂತಕ್ಕೆ ಚೆಕ್ ತೆಗೆದಿರುವ ಕುರಿತು |

ಹಿರಿಯ ಉಪನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಹಾವೇರಿ.

# ಹಾವೇರಿ ಜಿಲ್ಲೆ ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರು ಇವರ 2021-2022 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಟ್ಟ ಹಾಗೂ ವಸೂಲಾತಿಗೆ ಸೂಚಸಿದ ಮೊತ್ತದ ವಿವರ

| ಅ.ನಂ. | ಕಂಡಿಕೆ ಸಂ. | ಸಂಕ್ಷಿಪ್ತ ವಿವರ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| 01 | 18 | ಸ್ಲಂ ಸೆಸ್ ಭರಣಾ ಮಾಡದಿರುವುದು | 14,03,286-00 | --- |
| 02 | 20 | ಶೇ 5ರಷ್ಟು ಉತ್ತಮತೆಯ ಶುಲ್ಕವನ್ನು ನಗರ ಯೋಜನಾ ಮಂಡಳಿಗೆ ಭರಣಾ ಮಾಡದೇ ಇರುವುದು | 5,87,610-00 | --- |
| 03 | 22 | ಕಟ್ಟಡ ಬಾಡಿಗೆ ವಸೂಲಿಸದಿರುವುದು | --- | --- |
| 05 | 34 | ಲೆಕ್ಕ ಪರಿಶೋಧನಾ ಶುಲ್ಕವನ್ನು ಭರಣಾ ಮಾಡದಿರುವುದು | 85,855-00 | --- |
| | | ಒಟ್ಟು | 20,76,751-00 | --- |

ಹಿರಿಯ ಉಪನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಹಾವೇರಿ.

# ಹಾವೇರಿ ಜಿಲ್ಲೆ ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರು ಇವರ 2021-2022 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಭಾಗ -01

## 1. ಪೀಠಿಕೆ :

ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರ ಸಂಸ್ಥೆಯು ದಿನಾಂಕ : 21-01-1996 ರಿಂದ ಆಸ್ತಿತ್ವಕ್ಕೆ ಬಂದಿರುತ್ತದೆ. ನಗರ ಯೋಜನಾ ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಅಧಿನಿಯಮ 1961 ಕಾಯ್ದೆಯ ಪ್ರಕಾರ ಕರ್ತವ್ಯ ನಿರ್ವಹಿಸುತ್ತಿದ್ದು ಪ್ರಸುತ್ತವಾಗಿ ರಾಣೇಬೆನ್ನೂರು ನಗರ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದಂತೆ ಭೂ ಬಳಕೆ ಬದಲಾವಣೆ,ವಿನ್ಯಾಸ ಅನುಮೋದನೆ ಹಾಗೂ ನಾಗರೀಕ ಸೇವಾ ನಿವೇಶನಗಳ ಹಂಚಿಕೆ ಮಾಡುವ ಕಾರ್ಯದಲ್ಲಿ ತೊಡಗಿಕೊಂಡಿದೆ. ರಾಣೇಬೆನ್ನೂರು ನಗರ ಯೋಜನಾ ಪ್ರಾಧಿಕಾರ ಕಚೇರಿ ಹಾಗೂ ಕಚೇರಿಯ ಚಟುವಟಿಕೆಗಳು ಕರ್ನಾಟಕ ಸರಕಾರದ ಅಧಿಸೂಚನೆ ಸಂ:ನಇ:252:ಟಿಟಿಪಿ:94:11: ಬೆಂಗಳೂರು, ದಿ: 22-01-1996 ರ ಪ್ರಕಾರ ಅನಿಯಮಿತ ನಗರ ಯೋಜನೆಯ ಬೆಳವಣಿಗೆಗಳನ್ನು ತಡೆದು ನಿಯಮಿತವಾಗಿ ನಗರ ಬೆಳವಣಿಗೆಯ ಯೋಜನೆಗಳನ್ನು ನೂಪಿಸುವ ಉದ್ದೇಶದಿಂದ ಸ್ಥಾಪಿತವಾಗಿರುತ್ತದೆ. ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಅನುಚ್ಛೇದ 68-ಸಿ (2) ರಲ್ಲಿ ವಿದಿವತ್ತಾದ ಅಧಿಕಾರದ ಮೇರೆಗೆ ಸದರಿ ಪ್ರಾಧಿಕಾರ ವಾರ್ಷಿಕ ಲೆಕ್ಕ ತನಿಖೆಯನ್ನು ಕೈಗೊಂಡು ಲೆಕ್ಕ ಪರಿಶೋಧನಾ ವರದಿಯನ್ನು ಬಿಡುಗಡೆ ಮಾಡಲಾಗಿರುತ್ತದೆ.

## 2. ಸಾಮಾನ್ಯ ಪರಿಚಯ :

| | | |
|---|---|---|
| 1 | ಸಂಸ್ಥೆಯ ಹೆಸರು | ನಗರ ಯೋಜನಾ ಪ್ರಾಧಿಕಾರ, ರಾಣೇಬೆನ್ನೂರು |
| 2 | ಲೆಕ್ಕ ಪರಿಶೋಧನಾ ಅವಧಿ | 2021-22 |
| 3 | ಲೆಕ್ಕ ಪರಿಶೋಧನಾ ಪ್ರಾರಂಭ ದಿನಾಂಕ | 18-07-2022 |
| 4 | ಲೆಕ್ಕ ಪರಿಶೋಧನಾ ಮುಕ್ತಾಯ ದಿನಾಂಕ | 28-07-2022 |
| 5 | ಲೆಕ್ಕ ಪರಿಶೋಧನಾ ತೆಗೆದುಕೊಂಡ ಮಾನವ ದಿನಗಳು | 10 ಮಾನವ ದಿನಗಳು |
| 6. | ಲೆಕ್ಕ ಪರಿಶೋಧಕರ ಹೆಸರು | ಶ್ರೀ ಎಸ್. ಎಸ್. ಗಡಾದ - ಲೆ.ಪ.ಅ<br>ಶ್ರೀ ವಿಶ್ವನಾಥ ಮರಳಿಹಳ್ಳಿ - ಪ್ರ.ದ.ಲೆ.ಸ<br>ಶ್ರೀ ಅರಿಹಂತ ದುಂಡಣ್ಣನವರ - ಪ್ರ.ದ.ಲೆ.ಸ.<br>ಶ್ರೀ ಕುಮಾರ ಗಾಣಿಗೇರ - ಪ್ರ.ದ.ಲೆ.ಸ. |
| 7 | ಅನುಮೋದಿಸಿದ ಅಧಿಕಾರಿಯ ಹೆಸರು ಹುದ್ದೆ | ಶ್ರೀ ವಿಶ್ವನಾಥ ಪಿ. ಬಿ.<br>ಹಿರಿಯ ಉಪನಿರ್ದೇಶಕರು (ಪ್ರ)<br>ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಹಾವೇರಿ |
| 8 | ಪುನರ್ ಪರಿಶೀಲಿಸಿದ ದಿನಾಂಕ | 09-09-2022 |

## 3. ಆಡಳಿತ ವರ್ಗದ ವಿವರ :

| | | |
|---|---|---|
| 1 | ಅಧ್ಯಕ್ಷರ ಹೆಸರು ಮತ್ತು ಅವಧಿ | ಶ್ರೀ ಚೋಳಪ್ಪ ಕಸವಾಳದ<br>01-04-2021 ರಿಂದ 31-03-2022 |
| 2 | ಸದಸ್ಯ ಕಾರ್ಯದರ್ಶಿಗಳು ಹೆಸರು, ಅವಧಿ | ಶ್ರೀ ಕೆ. ಆರ್. ಮಂಜು<br>01-04-2021 ರಿಂದ 31-03-2022 |

## 4. ಲೆಕ್ಕ ಪರಿಶೋಧನಾ ವ್ಯಾಪ್ತಿ :

ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರು ಸಂಸ್ಥೆಯ 2021-22 ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಪ್ರಾಧಿಕಾರವು ಒದಗಿಸಿದ ದಾಖಲೆಗಳ ಆಧಾರದ ಮೇಲೆ ಹಾಗೂ ಕೆಳಕಂಡ ನಿಯಮ ಮತ್ತು ಕಾಯಿದೆಗಳನ್ವಯ ಕೈಗೊಂಡಿರುತ್ತದೆ.

1) ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಅಧಿನಿಯಮ 1961
2) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1987
3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000
4) ಕರ್ನಾಟಕ ನಾಗರಿಕ ಸೇವಾ ನಿಯಮಗಳು
5) ಕರ್ನಾಟಕ ಆರ್ಥಿಕ ಸಂಹಿತೆ - 1958
6) ಸಾದಿಲ್ವಾರ ವೆಚ್ಚ ಕೈಪಿಡಿ - 1958
7) ಆಯವ್ಯಯ ಕೈಪಿಡಿ
8) ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ ಸಂಪುಟ 1 ಮತ್ತು 2
9) ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ 1 ಮತ್ತು 2

## 5. ಹಿಂದಿನ ವರದಿಗಳ ಆಕ್ಷೇಪಣೆಗಳಿಗೆ ಕೈಗೊಂಡ ಕ್ರಮ :

ಕರ್ನಾಟಕ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಆ್ಯಕ್ಟ 1987 ರ ಅಧಿನಿಯಮ 48(6) ರ ಪ್ರಕಾರ ವರದಿಗಳಲ್ಲಿಯ ಕಂಡಿಕೆಗಳಿಗೆ ಸೂಕ್ತ ಅನುಸರಣಾ ವರದಿಯನ್ನು ಸಲ್ಲಿಸಿ, ಕಂಡಿಕೆಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕಾಗಿದ್ದು, ಅದರಂತೆ ನಗರ ಯೋಜನಾ ಪ್ರಾಧಿಕಾರವು ಸಲ್ಲಿಸಿರುವ ಅನುಪಾಲನೆಯನ್ನು ಪರಿಶೀಲಿಸಿ ಈ ಕಚೇರಿಯ ಪತ್ರ ಸಂಖ್ಯೆ:ಹಿಲುನಿ/ಸ್ಥಲೆಪವ/ ಹಾಕಂಡಿಕೆಗಳ ತೀರುವಳಿ/22-23/116 ದಿ: 16-06-2022 ಮತ್ತು 78 ದಿ: 24-05-2022 ರಂತೆ ಒಟ್ಟು 04 ಆಕ್ಷೇಪಿತ ಕಂಡಿಕೆಗಳಿಂದ ರೂ. 10,80,620-00 ಹಾಗೂ 02 ವಸೂಲಾತಿ ಕಂಡಿಕೆಗಳಿಂದ ಮೊತ್ತ ರೂ. 50,400-00 ಗಳು ತೀರುವಳಿಯಾಗಿರುತ್ತದೆ. ಲೆಕ್ಕ ಪರಿಶೋಧನೆಯ ಪುನರ್ ಪರಿಶೀಲನೆ ಸಂದರ್ಭದಲ್ಲಿ ಪರಿಶೀಲಿಸಿದಂತೆ 2006-07 ನೇ ಸಾಲಿನ 01 ಕಂಡಿಕೆಯಿಂದ ರೂ. 24,78,359-00 ಗಳನ್ನು ತೀರುವಳಿಗೊಳಿಸಲಾಗಿರುತ್ತದೆ. ತೀರುವಳಿಯಾದ ಕಂಡಿಕೆಗಳ ವಿವರವು ಈ ಕೆಳಗಿನಂತಿರುತ್ತದೆ.

| ವರ್ಷ | ಕಂಡಿಕೆ ಸಂ. | ಸಂಕ್ಷಿಪ್ತ ವಿವರ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| 2020-21 | 18 | ಸ್ಲಂ ಸೆಸ್ ಭರಣಾ ಮಾಡದಿರುವುದು | 4,21,227-00 | --- |
| 2020-21 | 20 | ಶೇ 5ರಷ್ಟು ಉತ್ತಮತೆಯ ಶುಲ್ಕವನ್ನು ನಗರ ಯೋಜನಾ ಮಂಡಳಿಗೆ ಭರಣಾ ಮಾಡದೇ ಇರುವುದು | 3,27,580-00 | --- |
| 2020-21 | 22 | ಕಟ್ಟಡ ಬಾಡಿಗೆ ವಸೂಲಿಸದಿರುವುದು | --- | 50,400-00 |
| 2020-21 | 33 | ಟೆಂಡರ ಪ್ರಕಟಣೆ ಜಾಹೀರಾತುಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯ ಮುಖಾಂತರ ನೀಡದೇ ನೇರವಾಗಿ ಏಜನ್ಸಿಗಳಿಗೆ ನೀಡಿದ ಕುರಿತು | 2,85,200-00 | --- |
| 2020-21 | 34 | ಲೆಕ್ಕ ಪರಿಶೋಧನಾ ಶುಲ್ಕವನ್ನು ಭರಣಾ ಮಾಡದಿರುವುದು | 24,78,359-00 | --- |
| | | ಒಟ್ಟು | 35,58,979-00 | --- |

**ಆಕ್ಷೇಪಣೆ ಮತ್ತು ವಸೂಲಾತಿ ತೀರುವಳಿ ವಿವರಗಳ ಘೋಷವಾರೆ**

| ಕ್ರ.ಸಂ | ವರ್ಷ | ಆಕ್ಷೇಪಣೆ | | ವಸೂಲಾತಿ | |
|---|---|---|---|---|---|
| | | ಕಂಡಿಕೆ ಸಂಖ್ಯೆ | ಮೊತ್ತ | ಕಂಡಿಕೆ ಸಂಖ್ಯೆ | ಮೊತ್ತ |
| 1 | 01-04-2021 ಕ್ಕೆ ಪ್ರಾರಂಭದ ಶಿಲ್ಕು | 24 | 49,92,352-00 | 4 | 71,442-00 |
| 2 | 2021-22 ಕ್ಕೆ ಸೇರ್ಪಡೆ | 3 | 20,76,751-00 | 1 | 4,200-00 |
| 3 | ಒಟ್ಟು | 27 | 70,69,103-00 | 5 | 75,642-00 |
| 4 | 2021-22 ಕ್ಕೆ ತೀರುವಳಿ | 5 | 35,58,979-00 | 1 | 50,400-00 |
| 5 | 2021-22 ಕ್ಕೆ ಶಿಲ್ಕು | 22 | 35,10,124-00 | 4 | 25,242-00 |

**ಮೇಲೆ ತಿಳಿಸಿರುವಂತೆ ಇನ್ನೂ ಕಂಡಿಕೆಗಳು ಬಾಕಿ ಉಳಿದಿದ್ದು, ಬಾಕಿ ಉಳಿದಿರುವ ಕಂಡಿಕೆಗಳಿಗೆ ಬೇಗನೆ ಸೂಕ್ತ ಅನುಸರಣಾ ವರದಿ ಸಲ್ಲಿಸಿ ಕಂಡಿಕೆಗಳನ್ನು ಇತ್ಯರ್ಥಪಡಿಸಿಕೊಳ್ಳಲು ಸೂಚಿಸಿದೆ.**

**31-3-2022 ರ ಅಂತ್ಯಕ್ಕೆ ತಿರುವಳಿಯಾಗದೇ ಬಾಕಿ ಉಳಿದಿರುವ ಕಂಡಿಕೆಗಳ ವಿವರ ಕೆಳಗೆ ವಿವರಿಸಿದಂತಿದೆ ಹಾಗೂ ಅನುಬಂಧ - 01 ರಲ್ಲಿ ಲಗತ್ತಿಸಿದೆ**

| ಅ.ನಂ. | ಅವಧಿ | ಪದಪುಂಜ | ಆಕ್ಷೇಪಣೆಯ ಮೊತ್ತ | ಪದಪುಂಜ | ವಸೂಲಾತಿಯ ಮೊತ್ತ |
|---|---|---|---|---|---|
| 1 | 1996-2002 | 03 | 89,632-00 | 01 | 1,256-00 |
| 2 | 2002-03 | 01 | 7,900-00 | --- | --- |
| 3 | 2003-04 | 01 | 38,100-00 | --- | --- |
| 4 | 2004-05 | 00 | --- | --- | --- |
| 5 | 2005-06 | 00 | --- | --- | --- |
| 6 | 2006-07 | 01 | 24,78,359-00 | --- | --- |
| 7 | 2007-08 | 00 | --- | --- | --- |
| 8 | 2008-09 | 00 | --- | --- | --- |
| 9 | 2009-10 | 01 | 23,940-00 | --- | --- |
| 10 | 2010-11 | 03 | 2,09,298-00 | --- | --- |
| 11 | 2011-12 | 05 | 1,78,284-00 | --- | --- |
| 12 | 2012-13 | 01 | 57,650-00 | --- | --- |
| 13 | 2013-14 | 00 | --- | --- | --- |
| 14 | 2014-15 | 00 | --- | --- | --- |
| 15 | 2015-16 | 01 | 1,22,079-00 | --- | --- |
| 16 | 2016-17 | 00 | --- | --- | --- |
| 17 | 2017-18 | 03 | 7,06,490-00 | 01 | 7,186-00 |
| 18 | 2018-19 | 00 | --- | --- | --- |
| 19 | 2019-20 | 00 | --- | 01 | 12,600-00 |
| 20 | 2020-21 | 00 | --- | 00 | --- |
| 21 | 2020-21 | 03 | 20,76,751-00 | 01 | 4,200-00 |
| | ಒಟ್ಟು | 22 | 49,92,352-00 | 04 | 25,242-00 |

## ಲೆಕ್ಕ ಪರಿಶೋಧನಾ ತಿರುವಳಿ ವಹಿ :

2021-22 ನೇ ಸಾಲಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನಾ ತಿರುವಳಿ ವಹಿಯನ್ನು ನಿರ್ವಹಿಸಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ವಹಿಯನ್ನು ಪ್ರತಿ ಆರ್ಥಿಕ ವರ್ಷದ ಲೆಕ್ಕ ತನಿಖೆ ವರದಿಗಳ ಸಂಕ್ಷಿಪ್ತ ವಿವರಗಳನ್ನು ದಾಖಲಿಸಿಕೊಂಡು ಸಂಬಂಧಿಸಿದ ಕಂಡಿಕೆಗಳಿಗೆ ಸೂಕ್ತ ಹಾಗೂ ಸಮರ್ಥನೀಯವಾದ ಅನುಪಾಲನಾ ಉತ್ತರಗಳನ್ನು ದಾಖಲಿಸಿಕೊಂಡು, ಕಂಡಿಕೆಗಳ ತಿರುವಳಿಯಾದ ಪಕ್ಷದಲ್ಲಿ ಕಂಡಿಕೆಗಳನ್ನು ತಿರುವಳಿ ಮಾಡಿದ ವಿವರಗಳನ್ನು ಕೆಂಪು ಶಾಹಿಯಲ್ಲಿ ನಮೂದಿಸಿಕೊಂಡು ದೃಢೀಕರಣದೊಂದಿಗೆ ಮುಂದಿನ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ.

## ಭಾಗ - 02

## 6. ನಗದು ಶಿಲ್ಕು ಪರಿಶೀಲನೆ :

ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರು ಸಂಸ್ಥೆಯ 2021-22 ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ದಿನಾಂಕ :18-07-2022 ರಂದು ಪ್ರಾರಂಭಿಸಿದ್ದು, ಸದರ ದಿನಾಂಕದಂದು ನಗದು ಶಿಲ್ಕನ್ನು ಪರಿಶೀಲಿಸಲಾಗಿ ಕೈ ಶಿಲ್ಕು ಇರುವುದಿಲ್ಲ. ಈ ಕುರಿತು ನಗದು ಪುಸ್ತಕವನ್ನು ಪರಿಶೀಲಿಸಲಾಯಿತು.

## 7. ಸೇವಾ ಅಂಚೆ ಚೀಟಿಗಳ ಪರಿಶೀಲನೆ :

ವರದಿಯ ಅವಧಿಯು ಪ್ರಾರಂಭದ ದಿನಾಂಕ : 18-07-2022 ರಂದು ಸದರ ಅಂಚೆ ಚೀಟಿಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿ ಶಿಲ್ಕು ರೂ. 209/- ಇರುತ್ತದೆ. ಅಂಚೆ ಚೀಟಿಗಳ ಶಿಲ್ಕು ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಅಂಚೆ ಚೀಟಿಯ ಮುಖ ಬೆಲೆ | ಅಂಚೆ ಚೀಟಿಗಳ ಸಂಖ್ಯೆ | ಒಟ್ಟು ಮೌಲ್ಯ |
|---|---|---|---|
| 1 | 05 ರೂ. ಮುಖಬೆಲೆ | 41 | 205-00 |
| 2 | 02 ರೂ. ಮುಖಬೆಲೆ | 02 | 04-00 |
| | ಒಟ್ಟು | 43 | 209-00 |

## 8. ವಾರ್ಷಿಕ ಲೆಕ್ಕಪತ್ರಗಳ ಕುರಿತು :

ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಅಧಿನಿಯಮ 1961 ರ ನಿಯಮ 68 ಸಿ (1) ರ ಪ್ರಕಾರ ಯೋಜನಾ ಪ್ರಾಧಿಕಾರವು ಪ್ರತಿ ವರ್ಷ ವಾರ್ಷಿಕ ಸಮತೋಲನಾ ಪಟ್ಟಿಯೊಂದಿಗೆ (Balance Sheet) ತನ್ನ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ, ಅನುಮೋದನೆ ಪಡೆದು ಲೆಕ್ಕಪರಿಶೋಧನೆ ಮಾಡುವ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಹಾವೇರಿ ಕಚೇರಿಗೆ ಹಾಗೂ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗುತ್ತದೆ ಆದರೆ 2021-22 ನೇ ಸಾಲಿಗೆ ಸಂಬಂಧಿಸಿದಂತೆ ವಾಸ್ತವಿಕ ಜಮಾ ಮತ್ತು ಖರ್ಚಿನ ತಃಖ್ತೆಯನ್ನು ತಯಾರಿಸಿ ಸದಸ್ಯ ಕಾರ್ಯದರ್ಶಿಯವರಿಂದ ದೃಡಿಕರಿಸಿದ ಪ್ರತಿಯನ್ನು ಮಾತ್ರ ಲೆಕ್ಕ ಪರಿಶೋಧನೆಗೆ ಒದಗಿಸಿರುತ್ತಾರೆ. ಇನ್ನು ಮುಂದೆ ನಿಯಮಾನುಸಾರ ಸೂಕ್ತ ರೀತಿಯಲ್ಲಿ ತನ್ನ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಸಲ್ಲಿಸಲು ತಿಳಿಸಿದೆ.

## 9. ಪ್ರಾಧಿಕಾರದ ಲೆಕ್ಕಪತ್ರಗಳನ್ನು ದ್ವಿನಮೂದು ಲೆಕ್ಕಪದ್ಧತಿಯಲ್ಲಿ ನಿರ್ವಹಿಸದಿರುವುದು

ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಅಧಿನಿಯಮ 1961 ರ ನಿಯಮ 68 ಸಿ (1) ರ ಪ್ರಕಾರ ಯೋಜನಾ ಪ್ರಾಧಿಕಾರಗಳು ಸಮತೋಲನಾ ಪಟ್ಟಿ ಸೇರಿದಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರತಿ ವರ್ಷ ತಯಾರಿಸಬೇಕಾಗುತ್ತದೆ. ಆದ್ದರಿಂದ ತನ್ನ ಲೆಕ್ಕಪತ್ರಗಳನ್ನು ದ್ವಿನಮೂದು ಲೆಕ್ಕಪದ್ಧತಿಯಲ್ಲಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ. ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರು ಸಂಸ್ಥೆಯು ತನ್ನ ಲೆಕ್ಕಪತ್ರಗಳನ್ನು ದ್ವಿನಮೂನೆಯಲ್ಲಿ ನಿರ್ವಹಿಸಿರುವುದಿಲ್ಲ.

ಪ್ರಾಧಿಕಾರದ ವತಿಯಿಂದ ಸಾರ್ವಜನಿಕ ಉದ್ಯಾನವನ, ಆಟದ ಮೈದಾನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಪ್ರದೇಶಗಳು ಹಾಗೂ ಖಾಸಗಿ ಬಡಾವಣೆಗಳಲ್ಲಿ ಪ್ರಾಧಿಕಾರದ ಮಾಲೀಕತ್ವಕ್ಕೆ ಬಿಟ್ಟುಕೊಡುವ ಸ್ಥಿರ ಆಸ್ತಿಗಳು ಹಾಗೂ ಬ್ಯಾಂಕ್ ಸಾಲಗಳ ತಿರುವಳಿ, ಜಮಾ ಮತ್ತು ಖರ್ಚಿನಂತೆ ಪ್ರಾಧಇಕಾರದ ಲೆಕ್ಕಪತ್ರಗಳನ್ನು ಜೋಡು ನಮೂದು ಲೆಕ್ಕಪದ್ಧತಿ ಅಳವಡಿಸಿಕೊಂಡು ನಿರ್ವಹಿಸುವುದು ಅಗತ್ಯವಾಗಿರುತ್ತದೆ ವಾರ್ಷಿಕ ಲೆಕ್ಕಪತ್ರಗಳು ಸಾಮಾನ್ಯವಾಗಿ ಈ ಘಟಕಗಳನ್ನೊಳಗೊಂಡಿದೆ.

1) Balance Sheet
2) Income and Expenditure Account
3) Schedules to the above Financial Statement
4) Disclousure of Significant Accounting
5) Statement of Receipts and Payments
6) Disclousure of other information through Notes of Accounts

ಆರ್ಥಿಕ ಲೆಕ್ಕಪತ್ರಗಳ ಪ್ರತಿಯೊಂದು ಘಟಕಗಳಿಗೆ ಈ ವರ್ಷದ ಆರ್ಥಿಕ ವಿವರದೊಂದಿಗೆ ಹಿಂದಿನ ವರ್ಷದ ಆರ್ಥಿಕ ವಿವರಣೆಯಿರುವುದು ಅಗತ್ಯವಾಗಿದೆ. ಆರ್ಥಿಕ ಲೆಕ್ಕಪತ್ರವನ್ನು ಪೂರ್ಣಗೊಳಿಸಲು ಎಲ್ಲ ಸ್ವೀಕೃತಿ ಪಾವತಿ ಮತ್ತು ಆರ್ಥಿಕ ಆಸ್ತಿ/ ಹೊಣೆಗಾರಿಕೆಯ ಪೂರ್ಣ ವಿವರಗಳನ್ನು ಪಡೆಯಬೇಕಾಗುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ ( Indian Accounting Standards) ಅನ್ವಯ ವಾರ್ಷಿಕ ಲೆಕ್ಕಪತ್ರಗಳ ಭಾಗವಾದ ರಾಜಸ್ವ/ ಆದಾಯ ಮತ್ತು ವೆಚ್ಚಗಳ

ತಃಖ್ತೆಯಲ್ಲಿ ದ್ವಿನಮೂದು ಪದ್ಧತಿಯ ಪ್ರಕಾರ, ಆಯಾ ವರ್ಷಕ್ಕೆ ಸಂಬಂಧಿಸಿದಂತೆ ಸಂಚಯಿಸಿದೆ ( Accrued) ಆದಾಯ ಮತ್ತು ವೆಚ್ಚಗಳು ( ರಾಜಸ್ವಸ್ವೀಕೃತಿಯಾಗಿರಲಿ ಅಥವಾ ಸ್ವೀಕೃತಿಯಾಗದಿರಲಿ ಹಾಗೆಯೆ ವೆಚ್ಚಗಳು ಪಾವತಿಯಾಗಿರಲಿ ಅಥವಾ ಪಾವತಿಯಾಗದಿರಲಿ) ಇವುಗಳನ್ನು ಲೆಕ್ಕಪತ್ರಗಳಲ್ಲಿ ಪರಿಗಣೆಗೆ ತೆಗೆದುಕೊಂಡು ಆ ವರ್ಷದ ನಿಖರವಾದ ಆದಾಯ ಮತ್ತು ವೆಚ್ಚಗಳನ್ನು ತೋರಿಸುವುದು ಅನಿವಾರ್ಯವಾಗಿರುತ್ತದೆ. ಸ್ವೀಕೃತಿಗಳ ಮೊತ್ತ, (Demand, Collection & ಪಾವತಿಯಾಗಿರುವ ಮೊತ್ತ ಹಾಗೂ ಬಾಕಿ ಇರುವ ಮೊತ್ತದ ತಃಖ್ತೆಯನ್ನು Balance-DCB) ಕಡ್ಡಾಯವಾಗಿ ನಿರ್ವಹಿಸಬೇಕಾಗಿರುತ್ತದೆ. ಈ ಮಾಹಿತಿ ಇಲ್ಲದೆ ಹಾಗೂ ಈ ಮಾಹಿತಿಗಳನ್ನು ಲೆಕ್ಕಪತ್ರಗಳಲ್ಲಿ ಅಳವಡಿಸದೆ ಕೇವಲ ಪಾವತಿಸಿಕೊಂಡಿರುವ ಮೊತ್ತಗಳನ್ನು ಮಾತ್ರ ಲೆಕ್ಕಪತ್ರಗಳಲ್ಲಿ ಪರಿಗಣನೆಗೆ ತೆಗೆದುಕೊಂಡು ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿದ ದ್ವಿ ನಮೂದು ಪದ್ಧತಿಯಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ಸಂಚಯನ ಪದ್ಧತಿಯನ್ನು ( Accrual System) ಸಂಪೂರ್ಣವಾಗಿ ಪಾಲಿಸಿದಂತಾಗುವುದಿಲ್ಲ ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ ನೈಜವಾದ ಮತ್ತು ನ್ಯಾಯೋಚಿತ ವ್ಯವಹಾರಗಳನ್ನು ಮಂಡನೆ ಮಾಡಿದಂತಾಗುವುದಿಲ್ಲ

ಆದ್ದರಿಂದ ಪ್ರಾಧಿಕಾರವು ದ್ವಿನಮೂನೆ ಪದ್ಧತಿಯಲ್ಲಿ ( ಜೋಡು ನಮೂದು) ತನ್ನ ಲೆಕ್ಕಪತ್ರಗಳನ್ನು ನಿರ್ವಹಿಸಿ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಕ್ಕೆ ಹಾಗೂ ಈ ಕಚೇರಿಗೆ ನಿಗದಿತ ಅವಧಿಯಲ್ಲಿ ಸಲ್ಲಿಸಲು ಕ್ರಮಮಹಿಸಬೇಕೆಂದು ಸೂಚಿಸಿದೆ.

## 10. ಆಯವ್ಯಯ ಪತ್ರಿಕೆ ಕುರಿತು :

ವರದಿಯ ಅವಧಿಯಲ್ಲಿ 2021-22 ನೇ ಸಾಲಿನ ನಗರ ಯೋಜನಾ ಪ್ರಾಧಿಕಾರದ ಆಯವ್ಯಯ ಪತ್ರಿಕೆಯನ್ನು ಲೆಕ್ಕ ತಪಾಸಣೆಗೆ ಸಾಜರಪಡಿಸಿರುತ್ತಾರೆ. ಆದರೆ ಆಯವ್ಯಯದಲ್ಲಿ 2021-22 ನೇ ಸಾಲಿನ ನಿರೀಕ್ಷಿತ ಆದಾಯ ಮತ್ತು ನಿರೀಕ್ಷಿತ ವೆಚ್ಚದ ಬಗ್ಗೆ ನಿಖರವಾಗಿ ಸ್ಪಷ್ಟಪಡಿಸಿರುವುದಿಲ್ಲ. ಆದ್ದರಿಂದ ಆಯವ್ಯಯದಲ್ಲಿನ ಅಂಕಿ ಅಂಶಗಳನ್ನು ತಾತ್ಕಾಲಿಕವೆಂದು ಪರಿಗಣಿಸಲಾಗಿದೆ. ಈ ನ್ಯೂನ್ಯತೆಗೆ ಸಂಬಂಧಪಟ್ಟವರು ಜವಾಬ್ದಾರರಾಗುತ್ತಾರೆಂಬ ಅಂಶವನ್ನು ಗಮನಿಸಲು ಸೂಚಿಸಲಾಗಿದೆ. ಆಯವ್ಯಯದಲ್ಲಿ ಆರಂಭದ ಶಿಲ್ಕು ವರ್ಷದ ಅಂದಾಜು ಒಟ್ಟು ಪರಿಷ್ಕೃತ ವೆಚ್ಚ ವರ್ಷದ ವೆಚ್ಚ, ಅಂತಿಮ ಶಿಲ್ಕು ಇತ್ಯಾದಿಗಳಿರಬೇಕಾಗಿದ್ದು ಆಯವ್ಯಯ ಸಮರ್ಪಕವಾಗಿರುವುದಿಲ್ಲ ಮತ್ತು ಆಯವ್ಯಯವನ್ನು ನ್ಯೂನ್ಯತೆಗೆ ಒಳಪಡಿಸಲಾಗಿದೆ.

### 2021-22 ನೇ ಸಾಲಿನ ವಿವರ ಈ ಕೆಳಗಿನಂತಿದೆ

| ಅ.ನಂ. | ವಿವರ | ಆದಾಯ ಮೊತ್ತ | ವೆಚ್ಚದ ಮೊತ್ತ |
|---|---|---|---|
| 1 | ಅಯವ್ಯಯದಂತೆ | 2,65,00,000-00 | 42,65,000-00 |
| 2 | ವಾಸ್ತವಿಕವಾಗಿ | 4,26,81,633-00 | 38,37,619-00 |

1) ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಪ್ರಾಧಿಕಾರ 1961 ರ ನಿಯಮ 68-ಬಿ ಪ್ರಕಾರ ಪ್ರಾಧಿಕಾರವು ಮುಂಬರುವ ಆರ್ಥಿಕ ವರ್ಷದ ಆಯವ್ಯಯವನ್ನು ಪ್ರಾಧಿಕಾರದ ಸಭೆಯಲ್ಲಿ ಇಟ್ಟು ಖರಾಯಿಸಿ ಅನುಮೋದನೆ ಪಡೆಯಬೇಕಾಗುತ್ತದೆ. ಹಾಗೂ ಹೀಗೆ ಅನುಮೋದನೆ ಪಡೆದ ನಂತರ ಆಯವ್ಯಯವನ್ನು ಸರ್ಕಾರದ ಅನುಮೋದನೆ

ಪಡೆಯಬೇಕಾಗುತ್ತದೆ. ಆದರೆ ಪ್ರಾಧಿಕಾರವು ಸರ್ಕಾರದ ಅನುಮೋದನೆಯನ್ನು ಪಡೆದಿರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಹೀಗಾದಂತೆ ಕ್ರಮ ವಹಿಸಲು ಸೂಚಿಸಿದೆ.

2) ಆಯವ್ಯಯದ ಪ್ರಕಾರ ಒಟ್ಟು ನಿರೀಕ್ಷಿತ ಆದಾಯವು ರೂ. 265.00 ಕೋಟಿಗಳಷ್ಟಿದ್ದು ಪ್ರಾಧಿಕಾರವು ಕೇವಲ ರೂ. 427.00 ಲಕ್ಷಗಳಷ್ಟು ಆದಾಯವನ್ನು ಮಾತ್ರ ಕ್ರೋಢಿಕರಿಸಿದ್ದು ಒಟ್ಟು ನಿರೀಕ್ಷಿತ ಆದಾಯದಲ್ಲಿ ಕೇವಲ ಶೇಕಡಾ 161.06% ರಷ್ಟು ಪ್ರಗತಿ ಸಾಧಿಸಿರುತ್ತದೆ ನಿರೀಕ್ಷಿತ ವೆಚ್ಚವು ರೂ. 42.65 ಕೋಟಿಗಳಷ್ಟಿದ್ದು ವಾಸ್ತವಿಕವಾಗಿ ಕೇವಲ 38.38 ಲಕ್ಷದಷ್ಟು ಇರುತ್ತದೆ. ಅಂದರೆ ವಾಸ್ತವಿಕ ವೆಚ್ಚವು ನಿರೀಕ್ಷಿತ ವೆಚ್ಚಗಳಿಗಿಂತ ಕಡಿಮೆ ಇರುವುದು ಕಂಡು ಬಂದಿರುತ್ತದೆ.

3) ಪ್ರಾಧಿಕಾರದ ಆಯವ್ಯಯದ ನಿರೀಕ್ಷಿತ ಆದಾಯ ಮತ್ತು ಖರ್ಚಿಗೂ ಹಾಗೂ ವಾಸ್ತವಿಕ ಆದಾಯ ಮತ್ತು ಖರ್ಚಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಅಂದಾಜು ಪತ್ರಿಕೆ ಯಾವುದೇ ವಾಸ್ತವಾಂಶವನ್ನು ಒಳಗೊಳ್ಳದೇ ತಪ್ಪು ನಿರೀಕ್ಷೆಯಿಂದ ಮಾಡಲಾಗಿದೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಪ್ರಾಧಿಕಾರವು ಇನ್ನು ಮುಂದೆ ಆಯವ್ಯಯವನ್ನು ವಾಸ್ತವಿಕ ಅಂಕಿ ಅಂಶಗಳ ಆಧಾರದ ಮೇಲೆ ತಯಾರಿಸಿ ಶಾಸನಾತ್ಮಕ ನಿಬಂಧನೆಗಳಂತೆ ಆರ್ಥಿಕ ವರ್ಷ ಪ್ರಾರಂಭಕ್ಕೆ ಅನುಮೋದನೆ ಸಭೆಯು ಮಂಡಿಸಿ ಸರ್ಕಾರದಿಂದ ಅನುಮೋದನೆ ಪಡೆದುಕೊಳ್ಳುವುದು. ಭರಿಸಿದ ವೆಚ್ಚಗಳಿಗೆ ಆಯವ್ಯಯ ನಿಯಮಗಳನ್ವಯ ಮಂಜೂರಾತಿ ಪಡೆಯಲು ಸೂಚಿಸಿದೆ.

## 11. ಆರ್ಥಿಕ ಸ್ಥಿತಿ :

ರಾಣೇಬೆನ್ನೂರು ನಗರ ಯೋಜನಾ ಪ್ರಾಧಿಕಾರದ 2021-22 ನೇ ಸಾಲಿನ ಹಥಕಾಸು ವ್ಯವಹಾರದ ಆರ್ಥಿಕ ಸ್ಥಿತಿ ವಿವರ ಈ ಕೆಳಕಂಡಂತಿರುತ್ತದೆ. ಹಿಂದಿನ ವರದಿಯ ಅಂತಿಮ ಶಿಲ್ಕನ್ನೇ 2021-22 ನೇ ಸಾಲಿನ ಆರಂಭ ಶಿಲ್ಕಾಗಿ ಪರಿಗಣಿಸಲಾಗಿದೆ.

| ವಿವರ | ಆರ್ಥಿಕ ಸ್ಥಿತಿ | ತೊಡಗಿಸಿದ ಮೊತ್ತ |
|---|---|---|
| ಪ್ರಾರಂಭಿಕ ಶಿಲ್ಕು | 10,63,41,223-00 | 1,49,57,648-00 |
| ವರ್ಷದ ಜಮಾ | 4,26,81,633-00 | 13,54,782-00 |
| ಒಟ್ಟು | 14,90,22,856-00 | 1,63,12,430-00 |
| ಪ್ರಸಕ್ತ ಸಾಲಿನ ಖರ್ಚು | 38,37,619-00 | 0-00 |
| ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು | 14,51,85,237-00 | 1,63,12,430-00 |
| ಬ್ಯಾಂಕ್ ಪ್ರಕಾರ ಶಿಲ್ಕು | 14,52,64,578-00 | 1,63,12,430-00 |
| ವ್ಯತ್ಯಾಸ | 79,341-00 | 0-00 |

## 2021-22 ನೇ ಸಾಲಿನ ರಾಣೇಬೆನ್ನೂರು ನಗರ ಯೋಜನಾ ಪ್ರಾಧಿಕಾರ ಆರ್ಥಿಕ ತಃಖ್ತೆ

| ಕ್ರ. ಸಂ | ಬ್ಯಾಂಕ್ ಹೆಸರು | ಖಾತೆ ಸಂಖ್ಯೆ | ಪ್ರಾರಂಭಿಕ ಶಿಲ್ಕು | ಜಮಾ | ಬಡ್ಡಿ | ಒಟ್ಟು ಜಮಾ (5+6) | ವಾರ್ಷಿಕ ಒಟ್ಟು ಜಮಾ(4+7) | ಖರ್ಚು | ಅಂತಿಮ ಶಿಲ್ಕು ನಗದು ಪುಸ್ತಕದ ಪ್ರಕಾರ | ಅಂತಿಮ ಶಿಲ್ಕು ಪಾಸ್ ಪುಸ್ತಕದ ಪ್ರಕಾರ | [illegible] | ಷರಾ |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | ಎಕ್ಸಿಸ್ ಬ್ಯಾಂಕ್ | 911010009709 548 | 13977979 | 13243741 | 494126 | 13737867 | 27715846 | 3405728 | 24310118 | 24389459 | 79341 | ನಗದಾಗದೇ ಇರುವ ಚೆಕ್ಕುಗಳು |
| 2 | ಎಕ್ಸಿಸ್ ಬ್ಯಾಂಕ್ | 911010040764 340 | 1928375 | 1687657 | 82429 | 1770086 | 3698461 | 421227 | 3277234 | 3277234 | 0 | |
| 3 | ಯುನಿಯನ್ ಬ್ಯಾಂಕ್ | 376602010158 069 | 30787314 | 0 | 926051 | 926051 | 31713365 | 0 | 31713365 | 31713365 | 0 | |
| 4 | ಯುನಿಯನ್ ಬ್ಯಾಂಕ್ | 376602010157 905 | 55496948 | 14960175 | 1796481 | 16756656 | 72253604 | 7229 | 72246375 | 72246375 | 0 | |
| 5 | ಯುನಿಯನ್ ಬ್ಯಾಂಕ್ | 376602010165 486 | 2535467 | 2487280 | 72970 | 2560250 | 5095717 | 71 | 5095646 | 5095646 | 0 | |
| 6 | ಕಾರ್ಪೊರೇಶನ್ ಬ್ಯಾಂಕ್ | 5201010026 26205 | 1343 | 0 | 69 | 69 | 1412 | 53 | 1359 | 1359 | 0 | ನಗದು ಪುಸ್ತಕ ನಿರ್ವಹಿಸಿಲ್ಲ |
| 7 | ಕಾರ್ಪೊರೇಶನ್ ಬ್ಯಾಂಕ್ | 25010100258 2275 | 1377 | 0 | 73 | 73 | 1450 | 0 | 1450 | 1450 | 0 | ನಗದು ಪುಸ್ತಕ ನಿರ್ವಹಿಸಿಲ್ಲ |
| 8 | ಯುನಿಯನ್ ಬ್ಯಾಂಕ್ | 3766020101 68094 | 807774 | 3462901 | 56100 | 3519001 | 4326775 | 2466 | 4324309 | 4324309 | 0 | |
| 10 | ಯುನಿಯನ್ ಬ್ಯಾಂಕ್ | 3766020101 68093 | 804646 | 3357152 | 54428 | 3411580 | 4216226 | 845 | 4215381 | 4215381 | 0 | |
| | | ಒಟ್ಟು ರೂ. | 106341223 | 39198906 | 3482727 | 42681633 | 149022856 | 3837619 | 145185237 | 145264578 | 79341 | |

ಈ ಮೇಲೆ ಕಾಣಿಸಿದ ಬ್ಯಾಂಕ್ ಪಾಸ್ ಪುಸ್ತಕಗಳನ್ನ ಮಾತ್ರ ಲೆಕ್ಕ ಪರಿಶೋಧನೆಗೆ ಹಾಜರಪಡಿಸಿದ್ದು ಇನ್ನಾವುದೇ ಬ್ಯಾಂಕ್ ಖಾತೆಗಳನ್ನು ಹೊಂದಿದ್ದಲ್ಲಿ ಸಂಸ್ಥೆಯೇ ನೇರ ಹೊಣೆಗಾರರಾಗಿರುತ್ತದೆ.

| | | |
|---|---|---|
| 1 | ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು | 145185237 |
| 2 | ಬ್ಯಾಂಕ್ ಪಾಸ್ ಪುಸ್ತಕದ ಪ್ರಕಾರ ಅಂತಿಮ ಶಿಲ್ಕು | 145264578 |
| 3 | ವ್ಯತ್ಯಾಸದ ಮೊತ್ತ | 79341 |

ನಗದು ಪುಸ್ತಕಕ್ಕೂ ಹಾಗೂ ಬ್ಯಾಂಕ್ ಪಾಸ್ ಪುಸ್ತಕಕ್ಕೂ ಸುಮಾರು ರೂ. 79,341/- ಗಳ ವ್ಯತ್ಯಾಸವಿರುತ್ತದೆ. ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಮೇಲೆ ತಿಳಿಸಿರುವಂತೆ ಕೆಲವೊಂದು ಬ್ಯಾಂಕ್ ಖಾತೆಗಳಿಗೆ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ. ಹಾಗೂ ಕೆಲವು ಖಾತೆಗಳಿಗೆ ಬ್ಯಾಂಕ್ ಪಾಸ್ ಪುಸ್ತಕಗಳನ್ನು ಒದಗಿಸಿರುವುದಿಲ್ಲ. ಆದ್ದರಿಂದ ವ್ಯತ್ಯಾಸಕ್ಕೆ ನಿಖರವಾದ ಕಾರಣಗಳನ್ನು ಲೆಕ್ಕಪರಿಶೋಧನೆಯಲ್ಲಿ ಕಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಏನೆ ವ್ಯತ್ಯಾಸವಿದ್ದರೂ ಸಂಸ್ಥೆಯೇ ನೇರ ಹೊಣೆಗಾರಿಕೆಯಾಗಿರುತ್ತದೆ.

1. ಮೇಲೆ ಕಾಣಿಸಿದ ಬ್ಯಾಂಕ್ ಖಾತೆಗಳಾದ' ಏಕ್ಸಿಸ್ ಬ್ಯಾಂಕ್ - 911010009709548 ಹಾಗೂ 911010039861137 ನಗದು ಪುಸ್ತಕ ಸಮರ್ಪಕವಾಗಿ ನಿರ್ವಹಿಸಿರುವುದಿಲ್ಲ. ಆರಂಭಿಕ ಶಿಲ್ಕು ಅಂತಿಮ ಶಿಲ್ಕು ಇತ್ಯಾದಿಗಳನ್ನು ನಮೂದಿಸಿರುವುದಿಲ್ಲ. ಕಾರಣ ಮೇಲ್ಕಾಣಿಸಿದ ಖಾತೆಗಳಿಗೆ ಸಂಬಂದಿಸಿದಂತೆ ಪಾಸ್ ಪುಸ್ತಕದಿಂದ ವಿವರ ಪಡೆದು 2021-22 ನೇ ಸಾಲಿನ ಆರ್ಥಿಕ ತಃಖ್ತೆಯನ್ನು ತಯಾರಿಸಲಾಯಿತು. ವ್ಯತ್ಯಾಸಗಳೇನಾದರು ಕಂಡುಬಂದರೆ, ಸಂಸ್ಥೆಯವರೇ ನೇರ ಹೊಣೆಗಾರರಾಗಿರುತ್ತಾರೆ.

2. ಪ್ರತಿಯೊಂದು ಖಾತೆಯ ನಗದು ಪುಸ್ತಕದಲ್ಲಿ ಜಮೆಯ ಭಾಗದಲ್ಲಿ ಪ್ರತಿಯೊಂದು ಸ್ವೀಕೃತಿಗೂ ಯಾವ ಬಾಬ್ತಿನ ಜಮೆ ಎಂದು ನಮೂದಿಸಬೇಕು. ಪಾಸ್ ಪುಸ್ತಕದೊಂದಿಗೆ ಪ್ರತಿ ಮಾಹೆ ತಾಳೆ ಮಾಡಿಕೊಂಡು ಸಮನ್ವಯಗೊಳಿಸಿ ನಿರ್ವಹಿಸಬೇಕು.

3. ಇನ್ನು ಮುಂದೆ ನಿಯಮಗಳಲ್ಲಿ ಗೊತ್ತುಪಡಿಸಿದಂತೆ ಸಂಸ್ಥೆಗಳಲ್ಲಿ ಪ್ರತಿ ಬ್ಯಾಂಕ್ ಖಾತೆಗೆ ಪ್ರತ್ಯೇಕ ಬ್ಯಾಂಕ್ ಪುಸ್ತಕ ನಿರ್ವಹಿಸಿ ಆ ಖಾತೆಗೆ ಸಂಬಂಧಿಸಿದ ಆಯಾ ದಿನದ ಸ್ವೀಕೃತಿ ಮತ್ತು ಪಾವತಿಗಳ ವಿವರಗಳನ್ನು ಬ್ಯಾಂಕ್ ಖಾತೆವಾರು ನಮೂದಿಸುವುದು ಮತ್ತು ಲೆಕ್ಕ ಸಮನ್ವಯಗೊಳಿಸಲು ಸೂಚಿಸಿದೆ.

ನಗರ ಯೋಜನಾ ಪ್ರಾಧಿಕಾರವು ಒದಗಿಸಿರುವ ವಾರ್ಷಿಕ ಜಮಾ ಖರ್ಚಿನ ತಃಖ್ತೆಯನ್ನು ಅನುಬಂಧ-02(ಎ) ರಲ್ಲಿ ಲಗತ್ತಿಸಿದೆ.

## 12. ನಗದು ಪುಸ್ತಕದಲ್ಲಿನ ನ್ಯೂನ್ಯತೆಗಳು :

1) ಕೆ.ಎಫ್.ಸಿ. ಅನುಚ್ಛೇದ-329 (i) ರನ್ವಯ ಸರ್ಕಾರದ ಪರವಾಗಿ ಹಣವನ್ನು ಸ್ವೀಕರಿಸುವ ಪ್ರತಿಯೊಬ್ಬ ಅಧಿಕಾರಿಯು ನಗದು ಪುಸ್ತಕವನ್ನು ಇಡತಕ್ಕದ್ದು ಕೆ.ಎಫ್.ಸಿ.ಅನುಚ್ಛೇದ-329 (ii) ರನ್ವಯ ಎಲ್ಲಾ ಹಣದ ವಹಿವಾಟುಗಳನ್ನು ಅವು ಜರುಗುತ್ತಿರುವಂತೆಯೇ ನಗದು ಪುಸ್ತಕದಲ್ಲಿ ದಾಖಲ್ಮಾಡತಕ್ಕದ್ದು ಮತ್ತು ತನಿಖೆ ಮಾಡಿದ ಸಂಕೇತವಾಗಿ ಕಛೇರಿಯ ಮುಖ್ಯಧಿ ಕಾರಿಯು ಅದಕ್ಕೆ ಸಹಿ ಹಾಕಿ ದೃಢೀಕರಿಸಬೇಕು ಕೆ.ಎಫ್.ಸಿ. ಅನುಚ್ಛೇದ - 329 (iv) ರನ್ವಯ ಪ್ರತಿ ತಿಂಗಳು ಕೊನೆಗೆ ಲೆಕ್ಕ ಸಮನ್ವಯಗೊಳಿಸಿ ಅಒಈಷ್ವಾರೆ ದೃಢೀಕರಿಸಬೇಕು. ಇದರಂತೆ ಪರಿಶೀಲಿಸಲಾಗಿ ನಗದು ಪುಸ್ತಕವನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲ ಹಾಗೂ ಈ ಕೆಳಗಿನ ನ್ಯೂನ್ಯತೆಗಳು ಕಂಡು ಬಂದವು.

2) ಪ್ರತಿ ತಿಂಗಳ ಕೊನೆಗೆ ನಗದು ಪುಸ್ತಕದಲ್ಲಿ ಇದ್ದ ಶಿಲ್ಕನ್ನು ವಿವಿಧ ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿ ಇದ್ದಂತಹ ಶಿಲ್ಕಿನೊಂದಿಗೆ ತಾಳೆ ಮಾಡಿ, ವ್ಯತ್ಯಾಸಕ್ಕೆ ಕಾರಣಗಳೊಂದಿಗೆ ಶಿಲ್ಕು ದೃಢೀಕರಿಸಿರಲಿಲ್ಲ.

3) ವರ್ಷದ ಕೊನೆಗೆ 12 ತಿಂಗಳುಗಳ ಘೋಷ್ವಾರೆಯೊಂದಿಗೆ ನಗದು ಪುಸ್ತದಲ್ಲಿನ ಶಿಲ್ಕಿನೊಂದಿಗೆ ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿಯ ಶಿಲ್ಕಿನೊಂದಿಗೆ ತಾಳೆ ಮಾಡಿ ವ್ಯತ್ಯಾಸಕ್ಕೆ ಕಾರಣಗಳನ್ನು ನಮೂದಿಸಿ ಶಿಲ್ಕನ್ನು ದೃಢೀಕರಿಸಿರಲಿಲ್ಲ.

4) ಮುಂಗಡ ಸಂದಾಯಿಸಿದ್ದು, ಹೊಂದಾಣಿಕೆ ಮಾಡಿಕೊಂಡ ಸಂದರ್ಭಗಳಲ್ಲಿ ನಗದು ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಂಡಿರಲಿಲ್ಲ. ( ಕಾಂಟ್ರಾ ಎಂಟ್ರಿ ಮುಖಾಂತರ)

## 13. ಸಾಲದ ರಜಿಸ್ಟರ್ :

ನಗರ ಯೋಜನಾ ಪ್ರಾಧಿಕಾರವು ವರದಿಯ ಅವಧಿ 2021-22 ರಲ್ಲಿ ಸಾಲದ ರಜಿಸ್ಟರ್ ನಿರ್ವಹಿಸಲಾಗಿದ್ದು, ವರದಿ ಅವಧಿಯಲ್ಲಿ ಸಾಲ ಪಡೆದ ಬಗ್ಗೆ ಯಾವುದೇ ವ್ಯವಹಾರವಿಲ್ಲವೆಂದು ದೃಢೀಕರಿಸಿರುತ್ತಾರೆ.

## 14. ಅನುದಾನಗಳ ವಿವರ :

2021-22 ನೇ ಸಾಲಿನ ಅನುದಾನ ವಹಿಯನ್ನು ಮತ್ತು ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಾಗಿ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಆಗಿರುವುದಿಲ್ಲ.

## 15. ಮುಂಗಡ ರಜಿಸ್ಟರ್ ಕುರಿತು :

ವರದಿಯ ಅವಧಿಯಲ್ಲಿ ಸದರಿ ರಜಿಸ್ಟರ್ ನಿರ್ವಹಿಸಲಾಗಿದ್ದು ವರದಿಯ ಅವಧಿಯಲ್ಲಿ ಯಾವುದೇ ವ್ಯವಹಾರ ಇರುವುದಿಲ್ಲವೆಂದು ದೃಢೀಕರಿಸಿರುತ್ತಾರೆ.

## 16. ಠೇವಣಿ ವ್ಯವಹಾರ ಕುರಿತು :

ವರದಿಯ ಅವಧಿಯಲ್ಲಿ ನಗರ ಯೋಜನಾ ಪ್ರಾಧಿಕಾರವು ನೀಡಿದ ಜಮೆ ಹಾಗೂ ಖರ್ಚಿನ ತಃಖ್ತೆಯಲ್ಲಿ ಭದ್ರತಾ ಠೇವಣಿಯೆಂದು ರೂ. 46,786-00 ಬಂದಿರುತ್ತದೆ ಎಂದು ತಿಳಿಸಲಾಗಿದೆ ಆದರೆ ಅದಕ್ಕೆ ಸಂಬಂಧಿಸಿದ ಠೇವಣಿ ರಜಿಸ್ಟರನ್ನು ನಿರ್ವಹಿಸಿರುವುದಿಲ್ಲ. ಇದರಿಂದ ಠೇವಣಿ ವ್ಯವಹಾರವನ್ನು ಗಮನಿಸಲು ಆಗುವುದಿಲ್ಲಾ ಆದ್ದರಿಂದ ಠೇವಣಿ ರಜಿಸ್ಟರ್ ನಿರ್ವಹಿಸಲು ಸೂಚಿಸಲಾಗಿದೆ.

## 17. ಹಣ ತೊಡಗಿಸಿದ ವ್ಯವಹಾರದ ಕುರಿತು :

ಪ್ರಾಧಿಕಾರವು ತನಗೆ ಬಂದಂತಹ ಸ್ವೀಕೃತಿಗಳಲ್ಲಿ ತನ್ನ ಎಲ್ಲಾ ಖರ್ಚು-ವೆಚ್ಚಗಳನ್ನು ನಿಗಿಸಿ ಉಳಿದ ಮೊತ್ತವನ್ನು ವಿವಿಧ ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿಯನ್ನು ಇಡುತ್ತಾ ಬರುತ್ತಿದೆ. ಅದರಂತೆ 2021-22 ನೇ ಸಾಲಿನಲ್ಲಿ ವಿವಿಧ ಬ್ಯಾಂಕುಗಳಲ್ಲಿ ಹಣ ತೊಡಗಿಸಿದ ವಿವರ ಈ ಕೆಳಗಿನಂತಿಂದೆ.

| | | |
|---|---|---|
| 1 | ಆರಂಭಿಕ ಶಿಲ್ಕು | 1,49,57,648-00 |
| 2 | ವರ್ಷದಲ್ಲಿ ಯಾರಿಗೆ ಪುನಃ ತೊಡಗಿಸಿದ್ದು | 13,54,782-00 |
| 3 | ಒಟ್ಟು | 1,63,12,430-00 |
| 4 | ವರ್ಷದಲ್ಲಿ ನಗಧೀಕರಣ | ---- |
| 5 | ಕೊನೆಯ ಶಿಲ್ಕು | 1,63,12,430-00 |

| ಅ.ನಂ | ಬ್ಯಾಂಕಿನ ಹೆಸರು | ರಶೀದಿ ಸಂಖ್ಯೆ | ತೊಡಗಿಸಿದ ದಿನಾಂಕ | ತೊಡಗಿಸಿದ ಮೊತ್ತ | ನವೀಕರಣ ದಿನಾಂಕ | ನವೀಕರಣ ಮೊತ್ತ |
|---|---|---|---|---|---|---|
| 1 | ಬ್ಯಾಂಕ್ ಆಫ್ ಬರೋಡ, ರಾಣೇಬೆನ್ನೂರು | 118103311000026 | 17-12-21 | 27,39,936-00 | 17-12-22 | 28,76,680-00 |
| 2 | ಬ್ಯಾಂಕ್ ಆಫ್ ಬರೋಡ, ರಾಣೇಬೆನ್ನೂರು | 73930300002571 | 28-12-21 | 26,88,652-00 | 28-12-22 | 28,38,206-00 |
| 3 | ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ,ರಾಣೇಬೆನ್ನೂರು | 376603030265158 | 11-09-21 | 17,90,089-00 | 11-09-22 | 18,81,286-00 |
| 4 | ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ,ರಾಣೇಬೆನ್ನೂರು | 376603030265508 | 31-12-21 | 15,01,472-00 | 31-12-22 | 15,77,965-00 |
| 5 | ಭಾರತೀಯ ಸ್ಟೇಟ್ ಬ್ಯಾಂಕ್ ರಾಣೇಬೆನ್ನೂರು | 40018135486 | 31-12-21 | 33,55,747-00 | 12-11-22 | 34,85,684-00 |
| 6 | ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ,ರಾಣೇಬೆನ್ನೂರು | 376603030272909 | 31-12-21 | 18,21,332-00 | 30-06-22 | 18,61,622-00 |
| 7 | ಕಾರ್ಪೋರೇಷನ್ ಬ್ಯಾಂಕ್ ರಾಣೇಬೆನ್ನೂರು | (530401001338553) 100014621 | 12-05-21 | 17,17,755-00 | 12-05-22 | 17,90,987-00 |
| | ಒಟ್ಟು | | | 1,56,14,983-00 | | 1,63,12,430-00 |

ನಗರ ಯೋಜನಾ ಪ್ರಾಧಿಕಾರವು 2021-22 ನೇ ಸಾಲಿನಲ್ಲಿ ಒಟ್ಟು 07 ಠೇವಣಿಗಳನ್ನು ಹೊಂದಿದ್ದು ಒಟ್ಟು ಠೇವಣಿ ಮೊತ್ತ ರೂ. 1,56,14,983-00 ಗಳಾಗಿದ್ದು ಅದರಲ್ಲಿ ನವೀಕರಣಗೊಂಡ ನಂತರ ಮೊತ್ತವು ರೂ. 1,63,12,430-00 ಗಳಾಗಿರುತ್ತದೆ.

ಬ್ಯಾಂಕುಗಳಲ್ಲಿ ಹಣವನ್ನು ಏಕ ಪಕ್ಷೀಯವಾಗಿ ತೊಡಗಿಸಿರುವುದು ಕಂಡುಬಂದಿರುತ್ತದೆ. ಬ್ಯಾಂಕುಗಳಲ್ಲಿ ಹಣವನ್ನು ತೊಡಗಿಸಲು ಬೇರೆ ಬೇರೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕೊಟೇಶನ್ ಕರೆದು ಅದರಲ್ಲಿ ಹೆಚ್ಚಿಗೆ ಬಡ್ಡಿಯನ್ನು ನೀಡುವ ಬ್ಯಾಂಕುಗಳಿಗೆ ಹಣವನ್ನು ತೊಡಗಿಸಿದಲ್ಲಿ ಹೆಚ್ಚಿನ ಬಡ್ಡಿ ಬರಬಹುದಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಎಫ್.ಡಿ 38 ಟಿಎಆರ್ 2018 ದಿ: 27-08-2018 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ : ಎಫ್.ಡಿ 8 ಟಿಎಆರ್ 2020 ದಿ: 12-03-2020 ರ ಸುತ್ತೋಲೆ ಪ್ರಕಾರ ಪ್ರಾಧಿಕಾರವು ತನ್ನ ಮೊತ್ತವನ್ನು ಹೂಡಿಕೆ ಮಾಡುವಾಗ ಕೈಗೊಳ್ಳಬೇಕಾದ ವಿವಿಧ ನಿಯಮಗಳನ್ನು ಪಾಲಿಸದೇ ಇರುವುದು ಕಂಡು ಬರುತ್ತದೆ. ಆದ್ದರಿಂದ ಇನ್ನು ಮುಂದೆ ಪ್ರಾಧಿಕಾರವು ಹೂಡಿಕೆ ಮಾಡುವ ಸಂದರ್ಭದಲ್ಲಿ ಮೇಲೆ ತಿಳಿಸಿದ ಸುತ್ತೋಲೆಗಳ ಪ್ರಕಾರ ಪಾಲಿಸಬೇಕಾದ ಎಲ್ಲಾ ನಿಯಮಗಳನ್ನು ಚಾಚು ತಪ್ಪದೇ ಪಾಲಿಸಲು ಸೂಚಿಸಿದೆ. ( ಹಣ ತೊಡಗಿಸಿದ ವ್ಯವಹಾರ ಅನುಬಂಧ - 03 ರಲ್ಲಿ ವಿವರಿಸಲಾಗಿದೆ)

## 18. ಕೊಳಚೆ ನಿರ್ಮೂಲನಾ ಉಪಕರ (ಸ್ಲಂ ಸೆಸ್) ವಸೂಲಿ ಕುರಿತು :

ಕೊಳಚೆ ನಿರ್ಮೂಲನಾ ಪ್ರಾಧಿಕಾರವು ನಿವೇಶನ ವಿನ್ಯಾಸ ಮಂಜೂರು ಮಾಡುವಾಗ ಹಾಗೂ ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ ನೀಡುವಾಗ ಸ್ಲಂ ಸೆಸ್ ಎಂದು ಈ ಕೆಳಕಂಡಂತೆ ವಸೂಲಿ ಮಾಡಲಾಗಿರುತ್ತದೆ.

| ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 18ರ ಅಡಿಯಲ್ಲಿ ಶುಲ್ಕ ರೂ. ಚ.ಮೀ. ಗಳಲ್ಲಿ | | | ಸ್ಲಂ ಸೆಸ್ (ಚ.ಮೀ. ಗಳಲ್ಲಿ) 0 ರಿಂದ 360ರ ವರೆಗೆ ಚ.ಮೀ. ಸಂ : ಪ್ರತಿ 10 ಚ.ಮೀ. |
|---|---|---|---|
| 01 | ವಸತಿ | ರೂ. 04-00 | 00.50 |
| 02 | ಕೈಗಾರಿಕೆ | ರೂ. 08-00 | 01.00 |
| 03 | ವಾಣಿಜ್ಯ | ರೂ. 12-00 | 01.00 |

ವಸೂಲಿ ಮಾಡಿದ ಸ್ಲಂ ಸೆಸ್ ನಲ್ಲಿ ಶೇ% 10 ರಷ್ಟನ್ನು ಸರಕಾರಿ ಆದೇಶ:ಸಂ:ವನಇ/180:ಎಂ. ಆಯ್. ಬಿ: 94ವಿ :293 / 1994 ಮತ್ತು ಸರ್ಕಾರದ ಸುತ್ತೋಲೆ ಸಂ: ನ. ಆ. ಇ: 812: ಎಂಡಿಬಿ: 95 :15-06-1996 ರ ಪ್ರಕಾರ ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿ, ಧಾರವಾಡಕ್ಕೆ ಭರಣಾ ಮಾಡಿ ಉಳಿದ ಶೇ% 30ರ ಮೊತ್ತವನ್ನು ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ವಿನಿಯೋಗಿಸಿರುವಂತೆ ಸೂಚನೆಗಳಿವೆ. ಹೀಗೆ ವಸೂಲಿ ಮಾಡಿದ ಸ್ಲಂ ಸೆಸ್‌ನ್ನು ಸದಸ್ಯ ಕಾರ್ಯದರ್ಶಿ ನಗರ ಯೋಜನಾ ಪ್ರಾಧಿಕಾರ ಮತ್ತು ಕಾರ್ಯನಿರ್ವಾಹಕ ಅಭಿಯಂತರರು ಕೊಳಚೆ ನಿರ್ಮೂಲನಾ ಮಂಡಳಿ ಇವರ ಜಂಟಿ ಹೆಸರಿನಲ್ಲಿ ಒಟ್ಟು ಸಂಗ್ರಹಿಸಿದ ಸ್ಲಂ ಸೆಸ್ ರೂ. 16,87,657-00 ಗಳನ್ನು ಆಕ್ಸಿಸ್ ಬ್ಯಾಂಕ್ ಖಾತೆ ಸಂಖ್ಯೆ 64340 ರಲ್ಲಿ ಜಮೆ ಮಾಡಿರುತ್ತಾರೆ.

ಕೊಳಚೆ ನಿರ್ಮೂಲನಾ ಮಂಡಳಿಗೆ ತುಂಬಬೇಕಾದ ಸ್ಲಂ ಸೆಸ್ ಶೇ 70% ರ ಮೊತ್ತದ ಬೇಡಿಕೆ ವಸೂಲಿ ಹಾಗೂ ಬಾಕಿ ರಜಿಸ್ಟರ್ ಇಟ್ಟಿರಲಿಲ್ಲ. ವರದಿಯ ಅವಧಿಯಲ್ಲಿ ವಿವರಿಸಿದ ಬಾಕಿ ಮೊತ್ತಗಳ ಆಧಾರದ ಮೇಲೆ ಈ ಕೆಳಗೆ ವಿವರಿಸಿದಂತೆ ಕೊಳಚೆ ನಿರ್ಮೂಲನಾ ಮಂಡಳಿ ಧಾರವಾಡಕ್ಕೆ ಭರಿಸಬೇಕಾದ ಮೊತ್ತವನ್ನು ಈ ಕೆಳಗಿನಂತೆ ಲೆಕ್ಕ ಹಾಕಲಾಗಿದೆ.

| ಅ.ನಂ | 70% ರಷ್ಟು ಹಿಂದಿನ ಬಾಕಿ | 2021-22 ರಲ್ಲಿ ವಸೂಲಿಸಿದ ಮೊತ್ತ | 70% ರಷ್ಟು ವರದಿ ಅವಧಿಗೆ | 2021-22ನೇ ಸಾಲಿನಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಗೆ ಭರಣಾ ಮಾಡಿದ್ದು | 2021-22 ರಲ್ಲಿ ವಸೂಲಿಗೆ 30% ಭಾಗ ಅಭಿವೃದ್ಧಿ ಕಾಮಗಾರಿಗೆ | ಕೊಳಚೆ ನಿರ್ಮೂಲನಾ ಮಂಡಳಿಗೆ ಭರಿಸಬೇಕಾದ ಬಾಕಿ ಮೊತ್ತ |
|---|---|---|---|---|---|---|
| 01 | 643153 | 1687657 | 1181360 | 421227 | 506297 | 1403286 |
| ಒಟ್ಟು | 643153 | 1687657 | 1181360 | 421227 | 506297 | 1403286 |

ಮೇಲೆ ವಿವರಿಸಿದಂತೆ ಕೊಳಚೆ ನಿರ್ಮೂಲನಾ ಮಂಡಳಿಗೆ ಭರಿಸಬೇಕಾದ ಹಿಂದಿನ ಸಾಲಿನ ಮೊತ್ತ ರೂ. 6,43,153-00 ಹಾಗೂ ಈ ಸಾಲಿನ ಮೊತ್ತ ರೂ. 11,81,360-00 ಹೀಗೆ ಒಟ್ಟು ರೂ. 18,24,513-00 ರಲ್ಲಿ ಈ ವರ್ಷ ರೂ. 4,21,227-00 ಗಳನ್ನು ಡಿ.ಡಿ ಸಂಖ್ಯೆ: 317565 ದಿನಾಂಕ: 08-11-2021 ರ ಮೂಲಕ ಭರಣಾ ಮಾಡಲಾಗಿ ಬಾಕಿ ರೂ. 14,03,286-00 ಉಳಿದಿರುತ್ತದೆ. ಆದ್ದರಿಂದ 2021-22 ನೇ ಸಾಲಿನ ಸ್ಲಂ ಸೆಸ್ ರೂ. 14,03,286-00 ಗಳನ್ನು ಭರಣಾ ಮಾಡುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.

## 19. ಸ್ಲಂ ಸೆಸ್ ಕುರಿತು :

ವರದಿಯ ಅವಧಿಯಲ್ಲಿ ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರು ಇವರು ಸ್ಲಂ ಸೆಸ್ ನಗದು ಪುಸ್ತಕವನ್ನು ನಿಯಮಾನುಸಾರ ನಿರ್ವಹಿಸಿರುವುದಿಲ್ಲ. ನಿರ್ವಹಿಸಿದ ನಗದು ಪುಸ್ತಕದ ಪ್ರಕಾರ ಜಮಾ ಖರ್ಚು ಮತ್ತು ಶಿಲ್ಕುಗಳ ವಿವರ ಈ ಕೆಳಗಿನಂತಿದೆ.

| | | |
|---|---|---|
| 1 | ಪ್ರಾರಂಭದ ಶಿಲ್ಕು | 19,28,375-00 |
| 2 | 2021-22 ರ ಜಮಾ(ಬ್ಯಾಂಕ್ ಬಡ್ಡಿ ಸೇರಿಸಿ) | 17,70,086-00 |
| 3 | ಒಟ್ಟು | 36,98,461-00 |
| 4 | 2021-22 ರ ಖರ್ಚು | 4,21,227-00 |
| 5 | 31-03-2022 ಕ್ಕೆ ನಗದು ಪುಸ್ತಕದ ಪ್ರಕಾರ ಶಿಲ್ಕು | 32,77,234-00 |
| 6 | 31-03-2022 ಕ್ಕೆ ಬ್ಯಾಂಕ್ ಪಾಸ್ ಬುಕ್ ಪ್ರಕಾರ ಶಿಲ್ಕು | 32,77,234-00 |

## 20. ಉತ್ತಮತೆಯ ಶುಲ್ಕದ ಶೇ:5ರ ಭಾಗ ರಾಜ್ಯ ನಗರ ಯೋಜನಾ ಮಂಡಳಿಗೆ ಭರಣಾ ಮಾಡುವ ಕುರಿತು :

ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು ರವರ ಪತ್ರ ಸಂ:ನಯೋ:ಮಂಡಳಿ:ಲೆವಿ(2)ಶುಪ:

2004:ದಿ:5-6-2004ರ ನ್ವಯ ಮತ್ತು ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 18 ರಡಿಯಲ್ಲಿ ಸಂಗ್ರಹಿಸಲ್ಪಟ್ಟು ಶುಲ್ಕದಲ್ಲಿ ಶೇ 5%ರ ಭಾಗವನ್ನು ರಾಜ್ಯ ನಗರ ಯೋಜನಾ ಮಂಡಳಿಗೆ ಜಮೆ ಮಾಡುವಂತೆ ನಿರ್ದೇಶಿಸಿದ ಪ್ರಕಾರ ಜಮಾ ಮಾಡಬೇಕಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಉತ್ತಮತೆ ಶುಲ್ಕ ರೂ. 1,21,67,446-00 ಗಳನ್ನು ಸ್ವೀಕರಿಸದ್ದು ಅವರ 5% ರ ಮೊತ್ತ ರೂ. 6,08,372-00 ಲೆಕ್ಕ ಹಾಕಲಾಗಿದೆ. ಸದರಿ ಮೊತ್ತವನ್ನು ರಾಜ್ಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು ಇವರಿಗೆ ಕಳುಹಿಸಬೇಕಾಗುತ್ತದೆ. ಆದರೆ ಇಲ್ಲಿವರೆಗೂ ಕಳುಹಿಸಿರುವುದಿಲ್ಲ. ಹಿಂದಿನ ಸಾಲಿನ ಶೇ 5% ರ ಮೊತ್ತ ರೂ. 3,48,082-00 ಗಳನ್ನು ಪಾವತಿಸಿರುತ್ತಾರೆ.

| | | |
|---|---|---|
| 1 | ಪ್ರಾರಂಭದ ಶಿಲ್ಕು | 3,27,580-00 |
| 2 | ಪ್ರಸಕ್ತ ಸಾಲಿನಲ್ಲಿ ಸಂಗ್ರಹಿಸಿದ ಉತ್ತಮತೆ ಶುಲ್ಕ 5% | 6,08,372-00 |
| 3 | ಒಟ್ಟು | 9,35,952-00 |
| 4 | ಸಂಗ್ರಹಿಸಿದ ಉತ್ತಮತೆ ಶುಲ್ಕ ಭರಣಾ ಮಾಡಿದ ವಿವರ | 3,48,342-00 |
| 5 | ಅಂತಿಮ ಶುಲ್ಕ | 5,87,610-00 |

ಭರಣ ಮಾಡಲು ಬಾಕಿ ಉಳಿದಿರುವ ಪ್ರಸಕ್ತ ಸಾಲಿನ ಉತ್ತಮತೆಯ ಶುಲ್ಕ ರೂ. 5,87,610-00 ಗಳನ್ನು ಸಂಬಂಧಪಟ್ಟ ರಾಜ್ಯ ನಗರ ಯೋಜನಾ ಮಂಡಳಿಗೆ ಕೂಡಲೇ ಭರಣಾ ಮಾಡಲು ಸೂಚಿಸಿದೆ. ಅಲ್ಲಿಯವರೆಗೆ ರೂ. 5,87,610-00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 21. ವರ್ಗೀಕರಣ ರಜಿಸ್ಟರ್ ಬಗ್ಗೆ:

ನಗರ ಯೋಜನಾ ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಿಸಿದಂತೆ ವರದಿಯ ಅವಧಿಯ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಜಮೆಯ ಹಾಗೂ ವೆಚ್ಚದ ಕುರಿತು ವರ್ಗೀಕರಣ ನಿರ್ವಹಿಸಲಾಗಿದೆ. ವರ್ಗೀಕರಣ ರಜಿಸ್ಟರ್‌ನ್ನು ಆಯವ್ಯಯದಲ್ಲಿ ನಿರೀಕ್ಷಿತ ಜಮೆ ಶೀರ್ಷಿಕೆವಾರು ಜಮೆಯ ಕುರಿತು ಹಾಗೂ ಆಯವ್ಯಯದಲ್ಲಿ ವೆಚ್ಚ ಮಾಡಲು ನಿಗದಿಪಡಿಸಿದ ಶೀರ್ಷಿಕೆವಾರು ಮೊತ್ತದ ಬಗ್ಗೆ ಲೆಕ್ಕ ತನಿಖೆಯಲ್ಲಿ ಖಚಿತಪಡಿಸಿಕೊಳ್ಳಲಾಗಲಿಲ್ಲ. ಆದಾಗ್ಯೂ ನಗರ ಯೋಜನಾ ಪ್ರಾಧಿಕಾರದವರು ಸದರ ಅವಧಿಯ ಜಮೆ ಹಾಗೂ ವೆಚ್ಚ ವರ್ಗೀಕರಣದ ವಿವರಗಳನ್ನು ಪೂರೈಸಿದ್ದು ಇದು ತಾತ್ಕಾಲಿವೆಂದು ಪರಿಗಣಿಸಿ ಈ ವರದಿಗೆ ಲಗತ್ತಿಸಿ ಅನುಬಂಧ - 02 ರಲ್ಲಿ ತೋರಿಸಲಾಗಿದೆ.

## 22. ಕಟ್ಟಡ ಬಾಡಿಗೆ ಪೂರ್ಣ ಪ್ರಮಾಣದಲ್ಲಿ ವಸೂಲಿಸದಿರುವುದು:

ನಗರ ಯೋಜನಾ ಪ್ರಾಧಿಕಾರ ರಾಣೇಬೆನ್ನೂರು ಈ ಕಚೇರಿ ಕಟ್ಟಡದ ಮೇಲ್ಭಾಗವನ್ನು ಉಪ ಕೃಷಿ ನಿರ್ದೇಶಕರು-2 ರಾಣೇಬೆನ್ನೂರು ಇವರಿಗೆ ಕಛೇರಿಯ ಸಲುವಾಗಿ ದಿನಾಂಕ : 31-10-2014 ರಿಂದ ಸನ್ 2019-20 ರವರೆಗೆ ಬಾಡಿಗೆಗೆ ಕೊಡಲಾಗಿದೆ ಸದರಿ ಬಾಡಿಗೆಯನ್ನು ಹೆಚ್ಚಿಗೆಗೊಳಿಸಲು ಪ್ರಸ್ತಾಪವನ್ನು ಕೃಷಿ ಇಲಾಖೆಯ ಕಛೇರಿಗೆ ಕೇಳಿದಾಗ ''ಉಪ ಕೃಷಿ ನಿರ್ದೇಶಕರು-2 ರಾಣೇಬೆನ್ನೂರು ಇವರು ತಮ್ಮ ಕಛೇರಿ ಪತ್ರದ ಸಂಖ್ಯೆ (1) ಉಕೃನಿ/ರಾ/ಲೆ-2/ಕ.ಬಾ.ನ/2020-21/ 253-254/ದಿ:19-11-2020 ಹಾಗೂ (2) ಕ್ರ.ಸಂ/ಉಕೃನಿ-2/ರಾ/ವಿ-ವ-1/ಕ.ಬಾ/2020-21 ದಿ:27-01-2021 ರಲ್ಲಿ ಈ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ ರಾಣೇಬೆನ್ನೂರು ಇವರಿಗೆ ಪತ್ರ ಬರೆಯಲಾಗಿದೆ. ಆದರೆ ಬಾಡಿಗೆ ಪರಿಷ್ಕರಣೆಯಾದ ಬಗ್ಗೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲಾ. ಅಲ್ಲದೇ ಸದರಿ ಕಟ್ಟಡದಲ್ಲಿ ಬಾಡಿಗೆಯಿದ್ದ ಕೃಷಿ ಉಪ ನಿರ್ದೇಶಕರು-2 ರಾಣೇಬೆನ್ನೂರು ಇವರು ಸದರಿ ಕಟ್ಟಡವನ್ನು ಬಿಟ್ಟಿರುತ್ತಾರೆ. ಮತ್ತು ಏಪ್ರಿಲ್-21 ರಿಂದ ಫೆಬ್ರುವರಿ-22ರ ವರೆಗೆ ಪ್ರತಿ ತಿಂಗಳು ರೂ. 4,200-00 ರಂತೆ ಒಟ್ಟು 11 ತಿಂಗಳು ಬಾಡಿಗೆ ರೂ. 46,200-00 ಹಾಗೂ ಕಳೆದ ಸಾಲಿನಲ್ಲಿಯ ಬಾಕಿ ಬಾಡಿಗೆ ರೂ. 50,400-00 ಹೀಗೆ ಒಟ್ಟು ರೂ. 96,600-00 ವಸೂಲಿ ಮಾಡಿರುತ್ತಾರೆ. ಆದ್ದರಿಂದ ಈ ವಿಷಯದ ಕುರಿತು ಗಮನಹರಿಸಿ ಹಿಂದಿನ ಸಾಲಿನ ಹೊಸ ಪರಿಷ್ಕೃತ ಬಾಡಿಗೆಯನ್ನು ನಿಗದಿಪಡಿಸಿಕೊಂಡು ಬರಬೇಕಾದ ಬಾಡಿಗೆಯನ್ನು ವಸೂಲಿ ಮಾಡಲು ಸೂಚಿಸಲಾಗಿದೆ ಹಾಗೂ ಮಾರ್ಚ-22ರ ಬಾಡಿಗೆಯನ್ನು ವಸೂಲಿ ಮಾಡುವವರೆಗೆ ರೂ. 4,200-00 ಗಳನ್ನು ವಸೂಲಾತಿಗಾಗಿ ಇಡಲಾಗಿದೆ.

## 23. ಆಸ್ತಿ ಮತ್ತು ಋಣಗಳು :

ದಿ : 31-3-2022 ಕ್ಕೆ ನಗರ ಯೋಜನಾ ಪ್ರಾಧಿಕಾರವು ಹೊಂದಿದ ಆಸ್ತಿ ಮತ್ತು ಹೊಣೆಗಳ ವಿವರ ಈ ಕೆಳಗಿನಂತಿದೆ.

| ಅ.ನಂ. | ಆಸ್ತಿಗಳು | ಮೊತ್ತ | ಅ.ನಂ. | ಹೊಣೆಗಳು | ಮೊತ್ತ |
|---|---|---|---|---|---|
| 1 | 31-3-2022 ಕ್ಕೆ ಕೊನೆಯ ಶಿಲ್ಕು | 14,51,85,237-00 | 1 | 5% ರ ಉತ್ತಮತೆ ಶುಲ್ಕ | 3,48,342-00 |
| 2 | ತೊಡಗಿಸಿದ ಹಣ | 1,63,12,430-00 | 2 | ಸ್ಲಂ ಸೆಸ್ | 4,21,227-00 |
| 3 | ಮುಂಗಡ ಬಾಕಿ | --- | 3 | ಸಾಲಗಳು | --- |
| 4 | ನಿವೇಶನ ಶುಲ್ಕ | --- | 4 | ಲೆಕ್ಕ ಪರಿಶೋಧನಾ ಶುಲ್ಕ | 85,855-00 |
| 5 | --- | --- | 5 | ಋಣಕ್ಕಿಂತ ಹೆಚ್ಚಿನ ಆಸ್ತಿ | 16,06,42,243-00 |
| | ಒಟ್ಟು | 16,14,97,667-00 | | ಒಟ್ಟು | 16,14,97,667-00 |

ಮೇಲ್ಕಾಣಿಸಿದ ವಿವರಗಳಿಂದ ನಗರ ಯೋಜನಾ ಪ್ರಾಧಿಕಾರವು ದಿ: 31-3-2020 ರಂದು ಋಣಕ್ಕಿಂತ ಆಸ್ತಿ ರೂ.16,06,42,243-00 ಹೆಚ್ಚಿಗೆ ಇರುವುದು.

## 24. ದಿನವಹಿ ಪುಸ್ತಕವನ್ನು ನಿರ್ವಹಿಸದಿರುವ ಬಗ್ಗೆ :

ಕಟ್ಟಡ ಪರವಾನಿಗೆ ಪರಿಶೋಧನಾ ಶುಲ್ಕ, ಉತ್ತಮತೆ ಶುಲ್ಕ, ಕೊಳಚೆ ನಿರ್ಮೂಲನಾ ಶುಲ್ಕ, ಕಂಪೌಂಡ ಹಾಗೂ ಕೆರೆ ಶುಲ್ಕ ಇತರೆ ಬಾಬ್ತುಗಳಿಗೆ ಸಂಬಂಧಪಟ್ಟಂತೆ ನಿಗದಿಪಡಿಸಲಾದ ಶುಲ್ಕವನ್ನು ಸಂಬಂಧಪಟ್ಟವರು ನೇರವಾಗಿ ಬ್ಯಾಂಕಿಗೆ ಜಮಾ ಮಾಡಿದ್ದು ಚಲನ್‌ನ್ನು ಪ್ರಾಧಿಕಾರಕ್ಕೆ ತಂದು ಸಲ್ಲಿಸಿದ್ದಾರೆ. ಆದರೆ ಇದರ ಬಾಬ್ತು ದಿನವಹಿಯನ್ನು ನಿರ್ವಹಿಸಿ ದಿನವಹಿಗೆ ಪಡೆದು ನಂತರ ನಗದು ಪುಸ್ತಕಕ್ಕೆ ಪಡೆಯದೇ, ದಿನವಹಿಯನ್ನು ನಗದು ಪುಸ್ತಕದಂತೆ ನಿರ್ವಹಿಸಿರುತ್ತಾರೆ. ಇದರಿಂದಾಗಿ ಪ್ರತಿ ದಿನ ಎಷ್ಟು ಹಣ ಸಂಗ್ರಹವಾಯಿತೆಂಬ ಬಗ್ಗೆ ನಿಖರವಾಗಿ ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ದಿನವಹಿಯನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಲು ಸೂಚಿಸಲಾಗಿದೆ. ಮತ್ತು ದಿನವಹಿಯಿಂದ ನಗದು ಪುಸ್ತಕಕ್ಕೆ ಪಡೆಯಲು ಸೂಚಿಸಲಾಗಿದೆ. ಅಲ್ಲಿವರೆಗೂ ಇಂತಹ ನ್ಯೂನ್ಯತೆಗಳಿಗೆ ಸಂಬಂಧಪಟ್ಟವರು ಜವಾಬ್ದಾರರಾಗಿರುತ್ತಾರೆಂಬ ಅಂಶವನ್ನು ಗಮನಿಸಲು ಸೂಚಿಸಲಾಗಿದೆ.

## 25. ಕಟ್ಟಡ ಪರವಾನಿಗೆಯ ನೀಲಿ ನಕ್ಷೆಗಳಿಗೆ ಮಂಜೂರಾತಿ ನೀಡುವಾಗ ಶುಲ್ಕಗಳನ್ನು ಲೆಕ್ಕಾಚಾರದ ಬಗ್ಗೆ :

ವರದಿ ಅವಧಿಯಲ್ಲಿ ನಗರ ಯೋಜನಾ ಪ್ರಾಧಿಕಾರದಿಂದ ಕೆಲವೊಂದು ಕಡತಗಳಲ್ಲಿ ಕಟ್ಟಡ ಪರವಾನಿಗೆಯ ನೀಲಿ ನಕ್ಷೆಗಳನ್ನು ಮಂಜೂರು ಮಾಡುವಾಗ ವಸೂಲಿ ಮಾಡಬೇಕಾಗದ ಶುಲ್ಕಗಳಾದ ಕಂಪೌಂಡ ಶುಲ್ಕ, ಸ್ಲಂ ಶುಲ್ಕಗಳನ್ನು ನೀಲಿ ನಕ್ಷೆಗಳಲ್ಲಿರುವ ಕೆರೆ ಅಭಿವೃದ್ಧಿ ಶುಲ್ಕಗಳ ಅಳತೆಗಳನ್ನು ಪ್ರತ್ಯೇಕವಾಗಿ ಬರೆದುಕೊಂಡು ಲೆಕ್ಕಾಚಾರ ಹಾಕಿ ನಿಖರವಾದ ಶುಲ್ಕಗಳನ್ನು ಪಡೆದುಕೊಂಡು ಬ್ಯಾಂಕಿಗೆ ಜಮಾ ಮಾಡಿಸದೇ ಹಾಗೇ ನೇರವಾಗಿ ಲಿಖಿತವಾಗಿ ನಮೂದಿಸದೇ ಲೆಕ್ಕ ಹಾಕಿ ಬ್ಯಾಂಕಿಗೆ ಜಮಾ ಮಾಡಿಸಲಾಗಿದೆ. ಇದರಿಂದಾಗಿ ನಿಖರವಾಗಿ ಆಯಾ ಅಳತೆಗಳಿಗೆ ಅನುಗುಣವಾಗಿ ತುಂಬಿಸಲಾಗಿದೆಯೆ? ಎಂಬ ಬಗ್ಗೆ ಗೊಂದಲವಾಗುತ್ತದೆ. ಆದ್ದರಿಂದ ನೀಲಿ ನಕ್ಷೆಯಲ್ಲಿರುವ ಮಂಜೂರಾದ ಅಳತೆಗಳನ್ನು ಪ್ರತ್ಯೇಕ ನೋಟ್‌ಶೀಟ್‌ನಲ್ಲಿ ನಮೂದಿಸಿ ನಿಖರವಾದ ಅಳತೆಗಳ ಲೆಕ್ಕಾಚಾರ ಮಾಡಿ ನಿಗದಿಪಡಿಸಲಾದ ದರ ಮತ್ತು ಭರಣಾ ಮಾಡಬೇಕಾದ ಮೊತ್ತಗಳ ಬಗ್ಗೆ ಖಚಿತಪಡಿಸಿಕೊಂಡು ಬ್ಯಾಂಕಿಗೆ ಭರಣಾ ಮಾಡುವಂತೆ ಕ್ರಮ ಕೈಗೊಳ್ಳುವುದು ಮತ್ತು ಈ ಮೇಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ. ಕಾರಣ ಈ ರೀತಿ ನಿರ್ವಹಿಸಲಾದ್ದರಿಂದ ವರದಿಯ ಅವಧಿಯಲ್ಲಿ ಸದರಿ ಕೆಲವೊಂದು ಕಡತಗಳ ಮಾಹಿತಿಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇನ್ನು ಮುಂದೆ ಹೀಗಾಗದಂತೆ ಎಚ್ಚರ ವಹಿಸಲು ಸೂಚಿಸಲಾಗಿದೆ. ಇಂತಹ ನ್ಯೂನ್ಯತೆಗಳಿಗೆ ಸಂಬಂಧಪಟ್ಟವರು ಜವಾಬ್ದಾರರಾಗುತ್ತಾರೆಂಬ ಅಂಶವನ್ನು ಗಮನಿಸಲು ಸೂಚಿಸಲಾಗಿದೆ.

## 26 ಆದಾಯ ಕರ ರಿಟರ್ನ್ಸ್ ಸಲ್ಲಿಸುವ ಕುರಿತು :

ಪ್ರಾಧಿಕಾರದಿಂದ ಆದಾಯ ತೆರಿಗೆ ರಿಟರ್ನ್ ಸಲ್ಲಿಸಿದ ಬಗ್ಗೆ ಅಸೆಸ್‌ಮೆಂಟ್ ಇಯರ್ 2021-22 ನೇ ಸಾಲಿನ ವರದಿಯನ್ನು ಸಲ್ಲಿಸಿರುತ್ತಾರೆ. ಆದರೆ ಅಸೆಸ್‌ಮೆಂಟ್ ಇಯರ್ ಸನ್ 2022-23 ನೇ ಸಾಲಿನ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿರುವುದಿಲ್ಲ ಆದಕಾರಣ ಕೂಡಲೆ ಸಲ್ಲಿಸಲು ಸೂಚಿಸಲಾಗಿದೆ.

## 27 ಪ್ರಾಧಿಕಾರದ ಹಣವನ್ನು ಅಭಿವೃದ್ಧಿ ಕುರಿತು ಬಳಕೆ ಮಾಡುವ ಬಗ್ಗೆ :

ಕೆರೆ ಅಭಿವೃದ್ಧಿ ಶುಲ್ಕ ಸ್ಲಂ ಸೆಸ್ ಮತ್ತು ಪಾರ್ಕ ಡೆವಲಪ್‌ಮೆಂಟ್ ಇತ್ಯಾದಿಗಳನ್ನು ಪ್ರಾಧಿಕಾರವು ವಸೂಲಿಸಿ ಪ್ರಾಧಿಕಾರದ ನಿಧಿಗೆ ಜಮಾ ಮಾಡಿಕೊಂಡಿರುತ್ತದೆ. ಜಮಾ ಮಾಡಿದ ಮೊತ್ತ ಹಾಗೆಯೇ ಇರುತ್ತದೆ. ದಿನಾಂಕ: 31-03-2022 ಕ್ಕೆ ಕೆರೆ ಅಭಿವೃದ್ಧಿ ಶುಲ್ಕದ ಬ್ಯಾಂಕ್ ಖಾತೆಯಲ್ಲಿ ರೂ. 7,22,46,375-00 ಸ್ಲಂ ಸೆಸ್ ಖಾತೆಯಲ್ಲಿ ರೂ. 3277234-00, ಪಾರ್ಕ ಡೆವಲಪ್‌ಮೆಂಟ್ ಫಂಡ್ ಖಾತೆಯಲ್ಲಿ ರೂ. 31713365-00 ಸಾಮಾನ್ಯ ಖಾತೆಯಲ್ಲಿ ರೂ. 24389459-00 ಹೀಗೆ ವಿವಿಧ ಖಾತೆಗಳಲ್ಲಿ ಶಿಲ್ಕು ಇದ್ದು ಅದನ್ನು ಸಮರ್ಪಕವಾಗಿ ಬಳಸಿಕೊಳ್ಳದೇ ಬ್ಯಾಂಕ್ ಖಾತೆಯಲ್ಲಿರುತ್ತದೆ. ಸದರಿ ಮೊತ್ತವನ್ನು ಅಭಿವೃದ್ಧಿಗೆ ಬಳಕೆ ಮಾಡುವ ಕುರಿತು ಸಂಬಂಧಿಸಿದ ಸಕ್ಷಮ ಪ್ರಾಧಿಕಾರಕ್ಕೆ ಪತ್ರ ವ್ಯವಹಾರ ನಡೆಸಿ, ಅನುಮತಿಯನ್ನು ಪಡೆದು ಅಭಿವೃದ್ಧಿ ಕಾಮಗಾರಿಗಳಿಗೆ ಉಪಯೋಗಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯಿಸಿದೆ.

